INTERNATIONAL INDIAN SCHOOL, DAMMAM
FIRST TERM EXAM - JULY 2017 -18
THIRD LANGUAGE – KANNADA

CLASS VIII

MAX. MARKS : 80
TIME : 3 Hrs.

GENERAL INSTRUCTIONS:
1. Read all questions carefully before answering.
2. All questions must be numbered correctly as in the question paper.

**1. ಸರಿಯಾದ ಪದವನ್ನು ಆರಿಸಿ ಖಾಲಿ ಸ್ಥಳವನ್ನು ತುಂಬಿಸಿರಿ: [ 1 X 10 = 10 ]**

೧. ಅವರು ದಿನವೂ ಮಗ್ಗದಲ್ಲಿ ____________ ನೇಯುತ್ತಿದ್ದರು. [ ಚಾದರ, ಚಾಮರ, ಚಾಪೆ ]
೨. ಆತಂಕ ಪದದ ಅರ್ಥ - ________________ [ ನಿರಾತಂಕ, ಭಯ, ಜಯ ]
೩. ಸಾಧನೆ ಮಾಡುವವನು ______________ ನಾಗಿರುತ್ತಾನೆ. [ ಮಾದಕ, ಬಾಧಕ, ಸಾಧಕ ]
೪. ಧೃತರಾಷ್ಟ್ರನಿಗೆ ನೂರು ಮಂದಿ ________________ ಮಕ್ಕಳು. [ ಗಂಡು, ಮೊಂಡು, ಗುಂಡು ]
೫. ಒಂದು ಕೃತಕ ___________ ಯನ್ನು ಮಾಡಿಸಿ ಇಡಿಸಿದ್ದರು. [ ಗಿಣಿ, ಗುಣಿ, ಗಣಿ ]
೬. ಶಶಿಯಂಗಳದಿ ಭೂಮಿಯ ____________ [ ನೆರಳು, ಬೆರಳು, ಹರಳು ]
೭. ಆ ಮುದುಕನು ರಸ್ತೆಯಲ್ಲಿ ____________________ [ ಕುಳಿತಿದ್ದನು, ನಿಂತಿದ್ದನು, ಮಲಗಿದ್ದನು ]
೮. ತಿರುಳನು ತಿಳಿಯುತ ಪಡೆಯಿರಿ ____________ [ ಜ್ಞಾನ, ಮಾನ, ಸ್ಥಾನ ]
೯. ಮೃದು ದೇಹಕ್ಕೆ ನಾಟಿದ್ದ ______________ ವನ್ನು ಕಿತ್ತೆಸೆದನು. [ ಬಾಣ, ಜಾಣ, ಹಣ ]
೧೦. ಕೊಳದಲ್ಲಿ ಅನೇಕ __________ಗಳು ತೇಲಾಡುತ್ತಿದ್ದವು. [ ಕಾಗೆ, ಕೋಳಿ, ಹಂಸ ]

**2. ಅ) ಈ ಕೆಳಗಿನ ಎಂಟು ಪದಗಳ ಅರ್ಥ ಬರೆಯಿರಿ: [ ½ X 8 = 4 ]**

೧. ಅಂತರಿಕ್ಷ ೨. ನಿಪುಣ ೩. ಅನಾಥರು ೪. ದಯೆ ೫. ಇರುಳು
೬. ಪಾರ್ಥ ೭. ಶಶಿ ೮. ನೇಕಾರ ೯. ದಣಿವು

**ಆ) ಈ ಕೆಳಗಿನ ಎಂಟು ಪದಗಳ ವಿರುದ್ಧ ಪದ ಬರೆಯಿರಿ: [ ½ X 8 = 4 ]**

೧. ಸ್ವರ್ಗ ೨. ಪಾಪ ೩. ಪವಿತ್ರ ೪. ಶಿಷ್ಯ ೫. ಈಗ
೬. ಮೇಲ್ಭಾಗ ೭. ಕೀರ್ತಿ ೮. ಹೊರಗೆ ೯. ಜೋರಾಗಿ

**ಇ) ಇವುಗಳನ್ನು ಹೊಂದಿಸಿ ಬರೆಯಿರಿ: [ ½ X 10 = 5 ]**

| | |
|---|---|
| ೧. ಕಬೀರದಾಸರು | ಬೆಂಗಳೂರು |
| ೨. ಅಬ್ರಹಾಂಲಿಂಕನ್ | ಭೀಷ್ಮ |
| ೩. ೬೦ | ಮುಳುಗಿ |
| ೪. ಕರ್ನಾಟಕ | ಎಪ್ಪತ್ತು |
| ೫. ೭೦ | ಬಡಗೃಹಸ್ಥರು |
| ೬. ಕೃಪೆಯಿಟ್ಟು | ಅಮೆರಿಕ |
| ೭. ರಾಜೋಚಿತ | ತಿಳಿಯುತ |
| ೮. ನೀರೊಳು | ಅರವತ್ತು |
| ೯. ಪಿತಾಮಹ | ಕಾಯುತ್ತಾನೆ |
| ೧೦. ತಿರುಳನು | ವಿದ್ಯೆಗಳು |

ಈ) ಅಕ್ಷರಗಳನ್ನು ಜೋಡಿಸಿ ಸರಿಯಾದ ಪದ ರಚಿಸಿ: [ ½ X 4 = 2 ]

೧. ಜಪಾಂರಾಡು  ೨. ರಮನವಿಮಾ  ೩. ಧಕಸಾನು  ೪. ಣ್ಣುಕಯಣಿಗಿ

3. **ಅ) ಈ ನಾಲ್ಕು ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ: ( Any 4 ) [ 1 X 4 = 4 ]**

೧. ರಸ್ತೆ  ೨. ಪುಷ್ಪ  ೩. ರಕ್ಷಿಸು  ೪. ಶಶಿ  ೫. ವೃತ್ತಿ

**ಆ) ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ: [ 1 X 3 = 3 ]**

೧. ನವಿಲು.  ಗಿಣಿ,  ಧಣಿ,  ಹಂಸ

೨. ರವಿ,  ಸೂರ್ಯ,  ಭಾನು,  ಭೂಮಿ

೩. ಕತ್ತಿ,  ಈಟಿ,  ಬಾಣ,  ರಥ

**ಇ) ಈ ವಾಕ್ಯಗಳನ್ನು ಸರಿ/ ತಪ್ಪು ಎಂದು ಗುರುತಿಸಿ ಬರೆಯಿರಿ : [ 1 X 2 = 2 ]**

೧. ಸೂರ್ಯನಿಗೆದುರು ಸೂರ್ಯನು ಬರಲು

೨. ಗ್ರಹಣದ ಗುಟ್ಟನು ಅರಿಯುವಿರೇಕೆ?

**ಈ) ಸ್ವಂತ ವಾಕ್ಯದಲ್ಲಿ ಪದಗಳನ್ನು ಬಳಸಿ: ( any 2 ) [ 1 X 2 = 2 ]**

೧) ಬಾಣಪ್ರಯೋಗ  ೨. ಏಕಾಗ್ರತೆ  ೩. ಧನುರ್ವಿದ್ಯೆ

ಉ) ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ: [ 1 X 4 = 4 ]

1) 59  2) 33  3) 64  4) 75

ಊ) ಬಿಟ್ಟ ಸ್ಥಳ ತುಂಬಿಸಿ: [ 1 X 4 = 4 ]

೧. ಕಬೀರದಾಸರು ಮಾರಲು ತಂದಿದ್ದ ____________ ಚಾದರವನ್ನೇ ಅವನಿಗೆ ಹೊದಿಸಿದರು.

೨. ಬಸವಣ್ಣನವರ ವಚನ ______________ ದ ಮಹತ್ವವನ್ನು ಸಾರುವ ಸುಂದರ ವಚನ.

೩. ಧೃತರಾಷ್ಟ್ರ ಮತ್ತು ಪಾಂಡುರಾಜ ________________.

೪. ಅರ್ಜುನನ ಬಿಲ್ಲಿನಿಂದ _____________ ವು ಚಿಮ್ಮಿತು.

4. **ಒಂದು ವಾಕ್ಯದಲ್ಲಿ ಈ ಕೆಳಗಿನ ಎಂಟು ಪ್ರಶ್ನೆಗಳಿಗೆ ಉತ್ತರಿಸಿರಿ: ( any 8 ) [ 1 X 8 = 8 ]**

೧. ಧೃತರಾಷ್ಟ್ರನ ಮಕ್ಕಳನ್ನು ಏನೆಂದು ಕರೆಯುತ್ತಾರೆ?

೨. ಸಿದ್ಧಾರ್ಥನ ಮಗನ ಹೆಸರೇನು?

೩. ಸೂರ್ಯಗ್ರಹಣ ಹೇಗೆ ಉಂಟಾಗುತ್ತದೆ?

೪. ಜನರು ಯಾರನ್ನು ಉಳಿಸಲು ನೀರಿನಲ್ಲಿ ಮುಳುಗುತ್ತಾರೆ?

೫. ಕಬೀರದಾಸರು ದಿನವೂ ಏನು ಮಾಡುತ್ತಿದ್ದರು?

೬. ಭೀಮಸೇನನು ಗಿಳಿಯ ಕಣ್ಣಿಗೆ ಗುರಿ ಇಟ್ಟಾಗ ಕಾಣಿಸಿದುದೇನು?

೭. ವಿಶೇಷಣ ಎಂದರೇನು?

೮. ಸಂತ ಏಕನಾಥರು ಗಂಗಾಜಲವನ್ನು ಯಾರಿಗೆ ಕುಡಿಸಿದರು?

೯. ಕೌರವ - ಪಾಂಡವರಿಗೆ ಧನುರ್ವಿದ್ಯೆಯನ್ನು ಯಾರು ಕಲಿಸುತ್ತಿದ್ದರು?

5 .ಅ) ಈ ಪದ್ಯಭಾಗವನ್ನು ಪೂರ್ತಿಗೊಳಿಸಿರಿ: **[ 3mrks ]**

೧. ಅವರನು ________________

__________ ______________

____________________

______________ ಗುಣಿಗಿ

ಈ ಪದ್ಯ ಬರೆದ ಕವಿ _______________.

ಆ) ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: **[ 2 ½ X 4 = 10 ]**

೧. ಅಬ್ರಹಾಂ ಲಿಂಕನ್ ಯಾರು? ಅವನು ಎಲ್ಲಿಗೆ ಹೊರಟಿದ್ದನು?

೨. ಸಂತ ಏಕನಾಥರು ರಾಮೇಶ್ವರಕ್ಕೆ ಏಕೆ ಹೊರಟಿದ್ದರು?

೩. ಪಾಂಡವರು ಎಷ್ಟು ಮಂದಿ? ಅವರ ಹೆಸರುಗಳೇನು?

೪. ಗುರು ದ್ರೋಣರು ಭೀಮಸೇನನಿಗೆ ಏನೆಂದು ಬುದ್ಧಿ ಹೇಳಿದರು?

೫. ಪಿತಾಮಹನಾದ ಭೀಷ್ಮನು ಗುರು ದ್ರೋಣರಲ್ಲಿ ಏನೆಂದು ಕೇಳಿಕೊಂಡನು?

**6. ಅ ) ಕೆಳಗಿನ ವಾಕ್ಯಗಳಲ್ಲಿನ ಕರ್ತೃಪದದ ಲಿಂಗವನ್ನು ಬರೆಯಿರಿ:** [ ½ X 4 = 2 ]

೧. ಅವನು ಶಾಲೆಗೆ ಹೋದನು.

೨. ಸುಮ ನೃತ್ಯ ಮಾಡುವಳು.

೩. ಆಮೆಯು ನಿಧಾನವಾಗಿ ಚಲಿಸುತ್ತದೆ.

೪. ಎತ್ತುಗಳು ನೀರು ಕುಡಿಯುತ್ತವೆ.

**ಆ ) ಈ ವಾಕ್ಯಗಳಲ್ಲಿನ ವಚನ ಗುರುತಿಸಿ:** [ ½ X 2 = 1 ]

೧. ಹಂಸ ಪಕ್ಷಿಗಳು ಆಕಾಶದಲ್ಲಿ ಹಾರಾಡಿದವು.

೨. ಅವನು ಶಾಲೆಗೆ ಬರುತ್ತಿದ್ದನು.

**ಇ ) ಈ ಪದಗಳ ಲಿಂಗ ಬದಲಾಯಿಸಿ:** [ ½ X 4 = 2 ]

೧. ಯುವಕ   ೨. ಅಜ್ಜ   ೩. ಅಕ್ಕ   ೪. ತಮ್ಮ

**ಈ) ಈ ಪದಗಳ ವಚನ ಬದಲಾಯಿಸಿ [ ½ X 2 = 1 ]**

೧. ಅಣ್ಣಂದಿರು   ೨. ಹುಡುಗಿಯರು

**ಉ) ಈ ವಾಕ್ಯಗಳಲ್ಲಿನ ವಿಶೇಷಣ ಪದವನ್ನು ಗುರುತಿಸಿ:** [ ½ X 4 = 2 ]

೧. ಜಿರಾಫೆಗಳ ಕಿವಿಗಳು ಚುರುಕಾಗಿರುತ್ತವೆ.

೨. ಅದು ಎತ್ತರವಾದ ಮರ.

೩. ಹಸು ಸಾಧು ಪ್ರಾಣಿ.

೪. ಇದ್ದಕ್ಕಿದ್ದಂತೆ ಅಲ್ಲಿ ಭಯಂಕರ ಗಾಳಿ ಬೀಸತೊಡಗಿತು.

7. ಈ ಕೆಳಗಿನ ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಉತ್ತರಿಸಿರಿ: **[ 7 marks ]**

೧. ಬಿಜಾಪುರ ನಗರವನ್ನು ವಿಜಾಪುರ ಎಂತಲೂ ಕರೆಯುತ್ತಾರೆ. ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಬಿಜಾಪುರ ಜಿಲ್ಲೆಯೂ ಒಂದು. ಒಂದಾನೊಂದು ಕಾಲದಲ್ಲಿ ಬಿಜಾಪುರವು ಒಂದು ಸಾಮಾನ್ಯ ಗ್ರಾಮವಾಗಿತ್ತು. ಕ್ರಮೇಣ ರಾಜ ಮಹಾರಾಜರು ತಮ್ಮ ರಾಜಕೀಯ ಸಾಧನೆಗಾಗಿ ಬಳಸಿಕೊಂಡಾಗ ಗ್ರಾಮವು ನಗರವಾಗಿ ಬೆಳೆದು ಪ್ರಾಮುಖ್ಯತೆ ಪಡೆಯಿತು. ಕೆಲವು ರಾಜರ ಕಾಲದಲ್ಲಿ ಅದು ರಾಜಧಾನಿಯಾಗಿ ಬೆಳೆಯಿತು. ಬಿಜಾಪುರವು ಒಂದು ಐತಿಹಾಸಿಕ ನಗರವಾಗಿ ಬೆಳೆದು ಬಂದಿದೆ. ಅದು ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ ಎಲ್ಲದಕ್ಕೂ ಪ್ರಸಿದ್ಧಿ ಪಡೆದಿದೆ. ಬಿಜಾಪುರವು ಕ್ರಿ. ಶ. ೫೪೦ ರಿಂದ ಮೂರು ಶತಮಾನಗಳ ಕಾಲ ಬಾದಾಮಿ ಚಾಲುಕ್ಯರಾಜರ ವಶದಲ್ಲಿತ್ತು. ಚಾಲುಕ್ಯ ರಾಜರು ತಮ್ಮ ಕಾಲದಲ್ಲಿ ಬಿಜಾಪುರ ಹಾಗೂ ಅದರ ಸುತ್ತಮುತ್ತಲ ಸ್ಥಳಗಳಲ್ಲಿ ಸಾಕಷ್ಟು ಸಂಖ್ಯೆಯ ಸುಂದರ ದೇವಾಲಯಗಳನ್ನು ಕಟ್ಟಿಸಿದ್ದರು.

ಹಿಂದೆ ಎರಡನೇ ಇಬ್ರಾಹಿಂ ಆದಿಲ್ ಶಾಹ ಎಂಬ ಮುಸ್ಲಿಂ ದೊರೆ ಬಿಜಾಪುರವನ್ನು ಆಳುತ್ತಿದ್ದ. ಆತನು ತನ್ನ ಪತ್ನಿಯ ಹೆಸರಿನಲ್ಲಿ ವಿಶಾಲವಾದ ಕಟ್ಟಡ ಸಮುಚ್ಚಯವನ್ನು ಕಟ್ಟಿಸಿದ್ದ. ಅದರಲ್ಲಿ ಎರಡು ಕಟ್ಟಡಗಳಿವೆ. ಒಂದು ಮಸೀದಿ ಕಟ್ಟಡ. ಇನ್ನೊಂದು ಸಮಾಧಿ ಕಟ್ಟಡ. ಅದನ್ನು "ಇಬ್ರಾಹಿಂರೋಜಾ' ಎಂದು ಕರೆಯುತ್ತಾರೆ. ಇಬ್ರಾಹಿಂ ಆದಿಲ್ ಶಾಹನ ಮಗನ ಹೆಸರು ಮಹಮದ್ ಆದಿಲ್ ಶಾಹ . ಆತನ ಸಮಾಧಿಗಾಗಿ ಕಟ್ಟಿಸಿದ ಕಟ್ಟಡವೇ ಗೋಳಗುಮ್ಮಟ.

ಆದಿಲ್ ಶಾಹಿ ಸುಲ್ತಾನರು ಅನೇಕ ಕಟ್ಟಡಗಳನ್ನು ಕಟ್ಟಿಸಿದ್ದರು. ಗೋಳಗುಮ್ಮಟ , ಬಾರಾ ಕಮಾನ, ಇಬ್ರಾಹಿಂರೋಜಾ, ಜುಮ್ಮಾ ಮಸೀದಿ, ಆಸಾರ್ ಮಹಲ್, ಗಗನ್ ಮಹಲ್, ಆನಂದ್ ಮಹಲ್, ಮೆಹತರ್ ಮಹಲ್, ಸಂಗೀತ ಮಹಲ್, ಅರೆಕಿಲ್ಲೆ, ಉಪ್ಪಲಿ ಬುರುಜು, ಮುಲ್ಕ್ -ಎ- ಮೈದಾನ್ ಇವೇ ಮುಂತಾದುವು ಪ್ರಮುಖ ಕಟ್ಟಡಗಳು. ಆದರೆ ಇಡೀ ವಿಶ್ವವನ್ನೇ ಬೆರಗುಗೊಳಿಸುವ ನಿರ್ಮಾಣವೆಂದರೆ ಗೋಳಗುಮ್ಮಟ. ಭಾರತದ ವಾಸ್ತುಶಿಲ್ಪದ ಇತಿಹಾಸದಲ್ಲಿ ಬಿಜಾಪುರದ ಈ ಗೋಳಗುಮ್ಮಟವು ಅಮೋಘ ಕಲ್ಪನೆಯ ಒಂದು ಅಪರೂಪದ ವಿನ್ಯಾಸವಾಗಿದೆ. ಆದುದರಿಂದಲೇ ಇದು ಜಗತ್ತಿನ ಅದ್ಭುತಗಳಲ್ಲಿ ಒಂದು ಎಂಬ ಖ್ಯಾತಿಗೆ ಪಾತ್ರವಾಗಿದೆ.

ಪ್ರಶ್ನೆಗಳು:

೧. ____________________ ಒಂದು ಐತಿಹಾಸಿಕ ನಗರವಾಗಿ ಬೆಳೆದು ಬಂದಿದೆ.

೨. ಬಿಜಾಪುರದ ಇನ್ನೊಂದು ಹೆಸರೇನು?

೩. ______________ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಬಿಜಾಪುರ ಜಿಲ್ಲೆಯೂ ಒಂದು.

೪. ಬಿಜಾಪುರವು ಯಾವುದಕ್ಕೆ ಪ್ರಸಿದ್ಧಿ ಪಡೆದಿದೆ?

೫. ____________ ಸಮಾಧಿಗಾಗಿ ಕಟ್ಟಿಸಿದ ಕಟ್ಟಡವೇ ಗೋಳಗುಮ್ಮಟ.

೬. ವಿಶ್ವವನ್ನೇ ಬೆರಗುಗೊಳಿಸುವ ನಿರ್ಮಾಣವೆಂದರೆ __________________.

೭. ಬಿಜಾಪುರವು ಎಷ್ಟು ಶತಮಾನಗಳ ಕಾಲ ಬಾದಾಮಿ ಚಾಲುಕ್ಯರಾಜರ ವಶದಲ್ಲಿತ್ತು?

೮. ಬಿಜಾಪುರದಲ್ಲಿರುವ ಪ್ರಮುಖ ಕಟ್ಟಡಗಳು ಯಾವುವು?

೯. ಭಾರತದ __________ದ ಇತಿಹಾಸದಲ್ಲಿ ಈ ಗೋಳಗುಮ್ಮಟವು ಅಮೋಘ ಕಲ್ಪನೆಯ ಒಂದು ಅಪರೂಪದ ವಿನ್ಯಾಸವಾಗಿದೆ.

೧೦. ಇದು ಜಗತ್ತಿನ ____________ಗಳಲ್ಲಿ ಒಂದು ಎಂಬ ಖ್ಯಾತಿಗೆ ಪಾತ್ರವಾಗಿದೆ.